8

# ಬಾಪ್ತಿಸ್ಮ ಆತ್ಮಿಕ ಸುನ್ನತಿಯಂತೆ

*"ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ; ನೀವು ಬಾಪ್ತಿಸ್ಮದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ. ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ" (ಕೊಲೊಸ್ಸೆ 2:11-13).*

ಕೊಲೊಸ್ಸೆ 2:11-13ನ್ನು, ಬಾಪ್ತಿಸ್ಮದ ಬಗೆಗಿನ ವಾಕ್ಯಭಾಗವನ್ನು, ಚರ್ಚಿಸುವ ಮೊದಲು ಕೊಲೊಸ್ಸೆಯದವರಿಗೆ ಪತ್ರಿಕೆಯನ್ನು ಬರೆಯುವದರಲ್ಲಿಯ ಪೌಲನ ಉದ್ದೇಶವನ್ನು ಗಮನಿಸೋಣ. ಕೊಲೊಸ್ಸೆ ಪತ್ರಿಕೆಯಲ್ಲಿ ಅವನ ಮುಖ್ಯ ಒತ್ತುವಿಕೆಯು ಯೇಸುವಿನ ಘನತೆಯಾಗಿರುತ್ತದೆ. ಅವನು ಯೇಸುವನ್ನು ಮನುಷ್ಯನ ಆಳವಾದ ಅಗತ್ಯತೆಗಳಿಗೆ ಉತ್ತರದಂತೆ ಚಿತ್ರಿಸಿದನು ಮತ್ತು ಯೇಸುವಿನಲ್ಲಿ ನಮಗೆ ವಿಮೋಚನೆ ಯಿದೆ, ನಮ್ಮ ಪಾಪಗಳ ಕ್ಷಮಾಪಣೆಯಿದೆ ಎಂದು ಒತ್ತಿ ಹೇಳಿದನು (ಕೊಲೊಸ್ಸೆ 1:14). ಯೇಸುವಿನ ಮಹಾ ಗುಣಲಕ್ಷಣಗಳ ಬಗ್ಗೆ ನಮ್ಮ ತಿಳುವಳಿಕೆಯು (ಕೊಲೊಸ್ಸೆ 1:15-18) ಆತನಲ್ಲಿ ನಮಗೆ ಭರವಸೆಯನ್ನು ಕೊಡತಕ್ಕದ್ದು.

ಕ್ರೈಸ್ತರು ಅಂಧಕಾರದ ದೊರೆತನದಿಂದ ಬಿಡಿಸಲ್ಪಟ್ಟು ದೇವರ ಕುಮಾರನ ರಾಜ್ಯದೊಳಗೆ ಸೇರಿಸಲ್ಪಟ್ಟಿದ್ದಾರೆ ಎಂದು ಪೌಲನು ಬೋಧಿಸಿದನು (ಕೊಲೊಸ್ಸೆ 1:13). ಈ ಪತ್ರಿಕೆಯನ್ನು ಬರೆಯುವ ಸಮಯದಲ್ಲಿ (1) ಯೇಸುವು ಆಗಲೇ ಅರಸನಾಗಿದ್ದನು, (2) ಆತನ ರಾಜ್ಯವು ಅಸ್ತಿತ್ವದಲ್ಲಿತ್ತು, (3) ಕ್ಷಮಾಪಣೆಯು ಲಭ್ಯವಾಗಿತ್ತು, ಮತ್ತು (4) ಜನರು ಆತನ ರಾಜ್ಯದೊಳಗೆ ಪ್ರವೇಶಿಸುತ್ತಿದ್ದರು ಎಂದು ಅರ್ಥಕೊಡುತ್ತದೆ. ಯೇಸುವು ಪೌಲನಿಗೆ (ಸೌಲನಿಗೆ) ಕಾಣಿಸಿಕೊಂಡಾಗ, ಆತನು ಅವನಿಗೆ ಅವನನ್ನು ಅನ್ಯಜನರ ಬಳಿಗೆ "ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ಬೆಳಕಿನ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವದರಿಂದ ಪಾಪಪರಿಹಾರವನ್ನೂ ಪರಿಶುದ್ಧರಾದವರಲ್ಲಿ ಹಕ್ಕನ್ನು ಹೊಂದುವಂತೆ ಅವರ ಕಣ್ಣುಗ ಳನ್ನು ತೆರೆಯ ಬೇಕೆಂದು" ಕಳುಹಿಸುತ್ತೇನೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 26:18). ಕತ್ತಲೆಯಿಂದ ಬೆಳಕಿಗೆ ಬದಲಾಯಿಸಲ್ಪಟ್ಟವರು ಪಾಪಗಳ ಕ್ಷಮಾಪಣೆ ಹೊಂದಿದವರೂ ಯೇಸುವಿನ ರಾಜ್ಯದಲ್ಲಿ ಇರುವವರೂ ಆಗಿದ್ದಾರೆ.

ಯೇಸುವಿನಲ್ಲಿ ನಮಗೆ ವಿಮೋಚನೆಯೂ, ನಮ್ಮ ಪಾಪಗಳ ಕ್ಷಮಾಪಣೆಯೂ ಇರುವುದು (ಕೊಲೊಸ್ಸೆ 1:14). ಯೇಸುವಿನ ರಕ್ತವು ದೇವರೊಂದಿಗೆ ಮುರಿದ ನಮ್ಮ ಸಂಬಂಧವನ್ನು ಸರಿಪಡಿಸುವುದು (1:20-22).

ಇದಲ್ಲದೇ; ಯೇಸುವು ದೊಡ್ಡವನಾಗಿದ್ದಾನೆ, ಯಾಕಂದರೆ ಆತನು ದೇವರ ಸ್ವರೂಪನು (1:15); ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನು (1:15); ಎಲ್ಲವುಗಳ ಸೃಷ್ಟಿಕರ್ತನು (1:16); ಎಲ್ಲಕ್ಕೂ ಮೊದಲಿದ್ದವನು (1:17); ಸಮಸ್ತಕ್ಕೂ ಆಧಾರಭೂತನು (1:17); ಸಭೆಯು, ದೇಹದ ಶಿರಸ್ಸು (1:18); ಸತ್ತವರೊಳಗಿಂದ ಮೊದಲು ಎದ್ದು ಬಂದವನು (1:18); ಮತ್ತು ಪ್ರತಿಯೊಂದರಲ್ಲಿ ಪ್ರಥಮ ಸ್ಥಾನವಿರುವವನು (1:18) ಆಗಿದ್ದಾನೆ.

ಪೌಲನು ಯೇಸುವನ್ನು ಕುರಿತು ಈ ಅಸ್ತಿವಾರದ ಸಂಗತಿಗಳನ್ನು, ನಮ್ಮನ್ನು ಯಾರಾದರೂ ನಮ್ಮ ಕರ್ತನಾದ ಯೇಸುವಿನಿಂದ ನಮ್ಮನ್ನು ದೂರ ನಡಿಸಿದಂತೆ ತೋರಿಸುವದಕ್ಕಾಗಿ ಹೇಳಿದನು (2:4, 8). ಆತನಲ್ಲಿ ಈ ಕೆಳಗಿನವುಗಳು ಕಂಡುಬರುತ್ತವೆ: ಜ್ಞಾನ ವಿದ್ಯಾಸಂಬಂಧವಾದ ಎಲ್ಲಾ ನಿಕ್ಷೇಪಗಳು (2:3), ದೇವತ್ವದ ಸರ್ವ ಸಂಪೂರ್ಣತೆಗಳು ದೈಹಿಕ ರೂಪದಲ್ಲಿ (2:9), ನಮ್ಮನ್ನು ಸಂಪೂರ್ಣಗೊಳಿಸುವ ಸಾಮರ್ಥ್ಯ (2:10), ಮತ್ತು ನಾವು ಬಾಪ್ತಿಸ್ಮ ಹೊಂದಿದಾಗ ನಮ್ಮ ಪಾಪಗಳನ್ನು ತೆಗೆದು ಹಾಕುವ ಯೇಸುವಿನ ಸುನ್ನತಿ (2:11-13). ಈ ವಾಸ್ತವಿಕತೆಗಳು, ಮನುಷ್ಯರ ಬೋಧನೆಗಳನ್ನೂ ಮತ್ತು ಧರ್ಮಶಾಸ್ತ್ರದಲ್ಲಿ ಆಜ್ಞಾಪಿಸಿದ ಆಚರಣೆಗಳನ್ನೂ ತಿರಸ್ಕರಿಸಲು ನಮಗೆ ಕಾರಣವಾಗುವ ಯೇಸುವಿನಲ್ಲಿ ಭರವಸೆಯುಳ್ಳವರಾಗಿರಲು ನಮಗೆ ಕಾರಣಗಳನ್ನು ಕೊಡುವವು (2:8, 14-17).

ನಮಗೆ ಯೇಸುವು ಇಲ್ಲದಿದ್ದರೆ, ನಾವು ನಿರೀಕ್ಷೆ ಇಲ್ಲದವರೂ ದೇವರು ಇಲ್ಲದವರೂ ಆಗುತ್ತೇವೆ; ಆದರೆ ನಾವು ಆತನಲ್ಲಿ ಇದ್ದರೆ, ಆತನ ರಕ್ತದಿಂದ ಸಮೀಪಕ್ಕೆ ತರಲ್ಪಡುತ್ತೇವೆ. "ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ" ಎಂದು ಎಫೆಸ 2:13 ಹೇಳುತ್ತದೆ.

ಮಹಿಮೆಯ ನಮ್ಮ ನಿರೀಕ್ಷೆಯು ಕ್ರಿಸ್ತನಲ್ಲಿ ಇರುವವು ಮತ್ತು ನಮ್ಮಲ್ಲಿ ಆತನು ಇರುವುದು ಆಗಿರುತ್ತದೆ (ಕೊಲೊಸ್ಸೆ 1:27). ಆತನಲ್ಲಿ ನಾವು ದೇಹದ ದುರಿಚ್ಛೆಗಳಿಂದ ಬಿಡುಗಡೆಯಾಗಿದ್ದೇವೆ, ಆತ್ಮಿಕವಾಗಿ ಜೀವಿಸುವವರಾಗಿದ್ದೇವೆ ಮತ್ತು ಎಲ್ಲಾ ಅಪರಾಧಗಳಿಂದ ಕ್ಷಮಿಸಲ್ಪಟ್ಟವರಾಗಿದ್ದೇವೆ (ಕೊಲೊಸ್ಸೆ 2:11-13).

ಅಧ್ಯಾಯ 2ರಲ್ಲಿ ಪೌಲನು ಕೊಲೊಸ್ಸೆಯಲ್ಲಿಯ ಕ್ರೈಸ್ತರು ಕ್ರಿಸ್ತನಿಗೆ ನಂಬಿಗಸ್ತರಾಗಿರಬೇಕೆಂದು ಒತ್ತಾಯಿಸುವದನ್ನು ಮುಂದುವರಿಸಿದನು. ಅವರು ಆತನಿಗೆ ಒಳಪಟ್ಟಿರುವರು, ಯಾಕಂದರೆ ಅವರು ಆತನಿಂದ ಆತ್ಮಿಕ ಸುನ್ನತಿಯನ್ನು ಹೊಂದಿದವರೆಂದು ಅವರಿಗೆ ಹೇಳಿದನು. ಈ ಆತ್ಮಿಕ ಸುನ್ನತಿಯು ಯಾವುದು?

## ಬಾಪ್ತಿಸ್ಮವು ಸುನ್ನತಿಯಂತಿರುವುದು

> ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ (ಕೊಲೊಸ್ಸೆ 2:11).

ಒಡಂಬಡಿಕೆಯ ಒಂದು ಮುದ್ರೆಯಂತೆ ಅವರು ಸುನ್ನತಿ ಮಾಡಿಸಿಕೊಂಡರೆ, ತಾನು ಅವರ ದೇವರಾಗಿರುವೆನೆಂದು ದೇವರು ಅಬ್ರಹಾಮನೊಂದಿಗೆ ಮತ್ತು ಅವನ ಸಂತತಿಯವರೊಂದಿಗೆ ಒಂದು ಒಡಂಬಡಿಕೆ ಮಾಡಿಕೊಂಡನು (ಆದಿಕಾಂಡ 17:7-11). ಸುನ್ನತಿ ಹೊಂದದ ಯಾವುದೇ ಗಂಡು ಮಗುವು ತನ್ನ ಜನರಿಂದ ಹೊರಗೆ

ಹಾಕಲ್ಪಡುತ್ತಿತ್ತು (ಆದಿಕಾಂಡ 17:14).

ಪೌಲನು ಒಂದು ಆತ್ಮಿಕ ಅರ್ಥದಲ್ಲಿ ಸುನ್ನತಿಯನ್ನು ಬಾಪ್ತಿಸ್ಮಕ್ಕೆ ಹೋಲಿಸಿದನು: ಸುನ್ನತಿಯಲ್ಲಿ ಮುಂದೋಗಲು ಮಗುವಿನಿಂದ ತೆಗೆದು ಹಾಕಲ್ಪಡುವಂತೆ, ಕ್ರೈಸ್ತನ ಹೃದಯದಿಂದ ಪಾಪಭರಿತ ದುರಾಶೆಗಳು ತೆಗೆದು ಹಾಕಲ್ಪಡಬೇಕು. ಪೌಲನು ಬಾಪ್ತಿಸ್ಮವನ್ನು ಸುನ್ನತಿಯೊಂದಿಗೆ ಹೋಲಿಸುವದರಿಂದ, ಬಾಪ್ತಿಸ್ಮದಲ್ಲಿ ಆತ್ಮಿಕ ಸುನ್ನತಿ ಯಾಗುತ್ತದೆಂದು ಬೋಧಿಸಿದ್ದಾನೆ. ಬಾಪ್ತಿಸ್ಮದಲ್ಲಿ, ಒಬ್ಬನು ದೈಹಿಕ ದುರಾಶೆಗಳನ್ನು ಮತ್ತು ಆಚರಣೆಗಳನ್ನು ತೆಗೆದು ಹಾಕುವದರಿಂದ ಆತ್ಮಿಕವಾಗಿ ಸುನ್ನತಿ ಹೊಂದಿದ್ದಾನೆ (ಕೊಲೊಸ್ಸೆ 2:11).

"ವಿಸರ್ಜಿಸುವುದು" (ಗ್ರೀಕ: *apekdusis*) ಎಂಬ ಮಾತು "ಅನಪೇಕ್ಷಿತ ಉಡುಗೆಗ ಳನ್ನು ಕಳಚುವದರ ಮತ್ತು ತೆಗೆದು ಹಾಕುವದರ ಒಂದು ರೂಪಕಾಲಂಕರವಾಗಿದ್ದರೂ, ಹಿಂದಿನ ಜೀವನದೊಂದಿಗೆ ಸಂಬಂಧ ಕಡಿದುಕೊಳ್ಳುವದನ್ನು ಸೂಚಿಸುತ್ತದೆ"[1] ಇಲ್ಲಿ ವಿವರಿಸಲ್ಪಟ್ಟಿರುವ ಸುನ್ನತಿಯು *"ಕೈಗಳಿಂದ ಮಾಡಿದ್ದು ಆಗಿರುವದಿಲ್ಲ,* ಅಂದರೆ, ಪೂರ್ಣವಾಗಿ ದೇವರ ಕೆಲಸದ್ದಾಗಿರುವುದು ... ಇದು ದೇವರ ಕೆಲಸವಾಗಿರುವುದು, ಬಾಪ್ತಿಸ್ಮದಲ್ಲಿ ಅನುಭವಿಸಿದ್ದಾಗಿರುವುದು ಎಂದು ಪೌಲನು ಒತ್ತಿ ಹೇಳುತ್ತಿರುವನು."[2] (ಇಂಥ ಮಾತುಗಳು ಮಾರ್ಕ 14:58 ಮತ್ತು 2 ಕೊರಿಂಥ 5:1ರಲ್ಲಿ ಕಂಡು ಬರುತ್ತವೆ.)

"ಶರೀರ ಭಾವದ ದೇಹ" ಎಂಬುದನ್ನು "ಪಾಪದ ದೇಹ" (ರೋಮಾಪುರ 6:6) ಮತ್ತು "ಈ ಮರಣದ ದೇಹ" (ರೋಮಾಪುರ 7:24) ಎಂದೂ ಸಹ ಉಲ್ಲೇಖಿಸಬಹುದು. ದೇಹ ಮತ್ತು ಮಾಂಸ ಪಾಪಭರಿತವಾದವುಗಳಾಗಿರುವದಿಲ್ಲ. ಯೇಸುವು ದೇಹಧಾರಿಯಾಗಿ ಬಂದದ್ದರಲ್ಲಿ ಇದು ಪ್ರತ್ಯಕ್ಷವಾಗಿದೆ (ಯೋಹಾನ 1:14; ರೋಮಾಪುರ 1:3) - ಆದರೆ ಅವುಗಳ ಮುಖಾಂತರ ಪಾಪವು ತನ್ನ ಆಕರ್ಷಣೆಯನ್ನು ಕಂಡುಕೊಳ್ಳುತ್ತದೆ. "ಮಾಂಸದಿಂದ," ಎಂಬುದರಿಂದ ಪೌಲನು ಮಾನವ ದುರಿಚ್ಛೆಗಳ ಮೂಲಕ ಪಾಪಭರಿತ ಸಂಗತಿಗಳು ನಮ್ಮನ್ನು ಶೋಧಿಸುತ್ತವೆ ಎಂದು ಅರ್ಥವುಳ್ಳ ವನಾಗಿದ್ದನು (ಗಲಾತ್ಯ 5:24). ಶಾರೀರಿಕ ಸಂಗತಿಗಳಾಗಿರುವ ಈ ದುರಿಚ್ಛೆಗಳು, ಒಂದು ಅರ್ಥದಲ್ಲಿ, ಬಾಪ್ತಿಸ್ಮದಲ್ಲಿ ಆತ್ಮಿಕವಾಗಿ ಒಳಗೊಂಡಿರುವದರಿಂದ ತೆಗೆದು ಹಾಕಲ್ಪಡುತ್ತೇವೆ.

ಸುನ್ನತಿ (ಕೊಲೊಸ್ಸೆ 2:11) ಮತ್ತು ಬಾಪ್ತಿಸ್ಮದ (2:12) ಮಧ್ಯದಲ್ಲಿ ಸಂಬಂಧವು ಸ್ಪಷ್ಟವಾಗಿದೆ. ಕ್ರಿಸ್ತನ ಸುನ್ನತಿಯು ಬಾಪ್ತಿಸ್ಮದಲ್ಲಿ ಪೂರೈಸಲ್ಪಟ್ಟಿದೆ ಎಂಬುದು ಪೌಲನ ಆಲೋಚನೆಯ ಪ್ರಗತಿಯಾಗಿದೆ.

ಮುರ್ರೆ ಹ್ಯಾರಿಸ್ ಹೀಗೆ ಹೇಳಿದ್ದಾರೆ, "ದೇವರ ಬಲವುಳ್ಳ ಚಟುವಟಿಕೆಯಲ್ಲಿ ನಿಮ್ಮ ನಂಬಿಕೆಯ ಮುಖಾಂತರ, ನೀವು ಆತನೊಂದಿಗೆ ಆತ್ಮಿಕವಾಗಿ ಎಬ್ಬಿಸಲ್ಪಟ್ಟಾಗ ಹೃದಯದ ಸುನ್ನತಿ ಆಯಿತು, ಸತ್ತವರೊಳಗಿಂದ ಯೇಸುವನ್ನು ಎಬ್ಬಿಸಿದ್ದರಿಂದ ಆ ಶಕ್ತಿಯನ್ನು ದೇವರು ಪ್ರದರ್ಶಿಸಿದನು."[3]

## ಬಾಪ್ತಿಸ್ಮದ ಅರ್ಥ

> ನೀವು ಬಾಪ್ತಿಸ್ಮದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ (ಕೊಲೊಸ್ಸೆ 2:12).

ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ "ಬಾಪ್ತಿಸ್ಮದಿಂದ" ಅರ್ಥವೇನಾಗುತ್ತದೆ ಎಂಬುದು ವಿವಿಧ ಮಾರ್ಗಗಳಲ್ಲಿ ದೃಷ್ಟಿಸಲ್ಪಟ್ಟಿದೆ:

(1) ಪೌಲನು ಆತ್ಮನ (ನೀರಿನದಲ್ಲ) ಬಾಪ್ತಿಸ್ಮವನ್ನು, ಸೂಚಿಸುತ್ತಿದ್ದಾನೆಂದು ಕೆಲವರು ಯೋಚಿಸಿದರು; ಆದರೆ ಇದು ಹಾಗಿರಲಾರದು. ಬಾಪ್ತಿಸ್ಮಕ್ಕೆ ಉಲ್ಲೇಖಗಳನ್ನು ಕುರಿತು, Albrecht Oepke ಹೀಗೆ ಗಮನಿಸಿದ್ದಾರೆ, "ಬಾಪ್ತಿಸ್ಮಕ್ಕೆ ಹೊಸ ಒಡಂಬಡಿಕೆಯ ಉಲ್ಲೇಖಗಳು, ಹಿನ್ನೆಲೆಯು ಬೇರೆಯಾಗಿ ಸೂಚಿಸಿರದಿದ್ದರೆ, ನೀರಿನ ಬಾಪ್ತಿಸ್ಮದಂತೆ ವಿಚಾರಿಸಲ್ಪಡತಕ್ಕದ್ದು. ಬಾಪ್ತಿಸ್ಮ ಅಂದರೆ ತಾಂತ್ರಿಕವಾಗಿ 'ನೀರಿನಲ್ಲಿ ಬಾಪ್ತಿಸ್ಮ ಮಾಡಿಸು' ಎಂದರ್ಥ ಕೊಡುತ್ತದೆ. ಆದುದರಿಂದ ಒಂದು ಮಾಧ್ಯಮವನ್ನು ಸ್ಪಷ್ಟಪಡಿಸುವುದು ಅಗತ್ಯವಾಗಿರುವದಿಲ್ಲ."[4]

ನಮ್ಮ ರಕ್ಷಣೆಯ ಆತ್ಮಿಕ ಭಾಗವು ಪಾಪದ ದೇಹವನ್ನು ತೆಗೆದು ಹಾಕಿ ಪಾಪವನ್ನು ಕ್ಷಮಿಸುವುದು ದೇವರ ಕಾರ್ಯವಾಗಿದೆ. ನಮ್ಮ ಭಾಗವು ದೇವರು ಮಾಡುತ್ತಿರುವದರಲ್ಲಿ ನಂಬಿಕೆಯ ಪ್ರತ್ಯುತ್ತರ ಬಾಪ್ತಿಸ್ಮವಾಗಿದೆ.

(2) ಬೇರೆ ಇತರರು ಪೌಲನು ಅಕ್ಷರಶಃ ಬಾಪ್ತಿಸ್ಮದ ಬದಲು ಸಾಂಕೇತಿಕವಾದದ್ದನ್ನು ಉಲ್ಲೇಖಿಸುತ್ತಿದ್ದನು ಎಂದು ಹೇಳುತ್ತಾರೆ, ಆದರೆ ಇದೂ ಸಹ ಸತ್ಯವಾಗಿರಲಾರದು, ಬೈಬಲಿನ ಇತರ ವಾಕ್ಯಭಾಗಗಳು ಬಾಪ್ತಿಸ್ಮವನ್ನು ಸಂಕೇತದಂತೆ ಮಾತ್ರ ಯೋಚಿಸಿದ್ದರೆ, ಆಗ ಅಂಥ ತೀರ್ಮಾನಕ್ಕೆ ಕೆಲವೊಂದು ಮೌಲ್ಯವಿರುತ್ತಿತ್ತು; ಹೀಗಿದ್ದರೂ, ಇತರ ಹೇಳಿಕೆಗಳು ಬಾಪ್ತಿಸ್ಮವು ನೀರನ್ನೊಳಗೊಂಡ ದೈಹಿಕ ಕೃತ್ಯವಾಗಿತ್ತೆಂದು ಸೂಚಿಸುತ್ತವೆ (ಮತ್ತಾಯ 3:13-17; ಅಪೊಸ್ತಲರ ಕೃತ್ಯಗಳು 8:35-39).

(3) ಇನ್ನೊಂದು ಯೋಚನೆಯ ಸರಣಿಯ ಪ್ರಕಾರ, ಬಾಪ್ತಿಸ್ಮದಲ್ಲಿ ಪರಿಣಾಮಗೊಳ್ಳುವ ರಕ್ಷಿಸುವ ನಂಬಿಕೆಯನ್ನು ದೇವರು ಹೃದಯದಲ್ಲಿ, ಹಾಕುವನೆಂದು ಪೌಲನು ಬೋಧಿಸಿದನೆಂದು ಹೇಳಲ್ಪಟ್ಟಿದೆ. ವ್ಯಾಖ್ಯಾನಿಗಳ ಒಂದು ಗುಂಪು ಹೀಗೆ ಬರೆಯಿತು, "ಯೇಸುವನ್ನು ಎಬ್ಬಿಸಿದ್ದರಲ್ಲಿ ದೇವರ ಬಲವಾದ ಕಾರ್ಯದಲ್ಲಿ, ನಂಬಿಕೆಯು ರಕ್ಷಿಸುವ ನಂಬಿಕೆಯಾಗಿದೆ (ರೋಮಾಪುರ 4:24; 10:9); ಮತ್ತು ಆತನು ಅದೇ 'ಬಲವಾದ ಕರ್ಯದಿಂದ' ಅದು ಪ್ರಾಣದಲ್ಲಿ ತರಲ್ಪಟ್ಟಿತು; ಅದರಿಂದ ಆತನು 'ಯೇಸುವನ್ನು ಮರಣದಿಂದ ಎಬ್ಬಿಸಿದನು' (ಎಫೆಸ 1:19, 20)."[5]

ಹೀಗಿದ್ದರೂ, ತಪ್ಪಿಹೋದವರ ಹೃದಯದಲ್ಲಿ ದೇವರು ವಿಶ್ವಾಸವನ್ನು ಹಾಕುವುದು ಸಭಾಪಂಗಡಗಳ ವಿಶ್ವಾಸ ಸೂತ್ರಗಳ ತತ್ವವಾಗಿದೆ, ಆದರೆ ಪರಿಶುದ್ಧ ಬರಹಗಳಿಂದ ಬಂದದ್ದಲ್ಲ. ನಂಬಿಕೆಯು ದೇವರ ವಾಕ್ಯವನ್ನು ಕೇಳುವದರ ಮುಖಾಂತರ ಬರುತ್ತದೆಂದು ಬೈಬಲ್ ಬೋಧಿಸುತ್ತದೆ (ಯೋಹಾನ 17:20; 20:30, 31; ಅಪೊಸ್ತಲರ ಕೃತ್ಯಗಳು 17:11, 12; ರೋಮಾಪುರ 10:17).

(4) ಬಾಪ್ತಿಸ್ಮ ಹೊಂದುತ್ತಿರುವವನ ವಿಶ್ವಾಸವು ಬಾಪ್ತಿಸ್ಮ ಹೊಂದುತ್ತಿರುವವನ ಜೀವನದಲ್ಲಿ ದೇವರು ಮಾಡುತ್ತಿರುವ ಯಾವುದೇ ಕೆಲಸದ ಬದಲು ಯೇಸುವಿನ ಪುನರುತ್ಥಾನದಲ್ಲಿ ಇಡಲ್ಪಡುತ್ತದೆ ಎಂಬುದು ಇನ್ನೊಂದು ದೃಷ್ಟಿಕೋನವಾಗಿದೆ. ಬಹಳ ಸ್ವಲ್ಪ ಜನ ವ್ಯಾಖ್ಯಾನಕಾರರು ಈ ಅರ್ಥ ವಿವರಣೆ ಕೊಡುವರು.

(5) ಅತೀ ಹೆಚ್ಚು ಸರಿಯಾದ ದೃಷ್ಟಿಕೋನವು ಪೌಲನು ಒಬ್ಬನು ಬಾಪ್ತಿಸ್ಮ ಹೊಂದುವದರಲ್ಲಿ ತನ್ನ ವಿಶ್ವಾಸವನ್ನು ದೇವರ ಕಾರ್ಯದಲ್ಲಿ ಇಡುವ - ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ಅದೇ ಕಾರ್ಯದಲ್ಲಿ - ತನ್ನ ಜೀವಿತಕ್ಕೆ ಯೇಸುವಿನ ಮರಣ ಮತ್ತು ಪುನರುತ್ಥಾನದ ರಕ್ಷಿಸುವ ಲಾಭಗಳನ್ನು ಅನ್ವಯಿಸಿಕೊಳ್ಳುವ - ನೀರಿನ ಬಾಪ್ತಿಸ್ಮವನ್ನು ಉಲ್ಲೇಖಿಸುವುದಾಗಿದೆ. ಇದು ಹಿನ್ನಲೆಯೊಂದಿಗೆ ಹೊಂದಿಕೊಳ್ಳುವಂಥದ್ದು

ಮತ್ತು ಅತಿ ಹೆಚ್ಚು ಯೋಗ್ಯವಾದ ವ್ಯಾಖ್ಯಾನವೂ ಆಗಿದೆ.

ರಾಲ್ಫ ಪಿ. ಮಾರ್ಟಿನ್ ಹೀಗೆ ಹೇಳಿದ್ದಾರೆ,

> ಆದುದರಿಂದ, ಕ್ರಿಸ್ತನ ವಿಮೋಚನೆಯು ಸಾಧಿಸಿದ ಆತ್ಮಿಕ ಸುನ್ನತಿಗೆ ಉತ್ತರಕೊಡುವ ಕ್ರೈಸ್ತ ಬಾಪ್ತಿಸ್ಮಕ್ಕೆ ಬಾಪ್ತಿಸ್ಮ ಹೊಂದುವವರ ಪರವಾಗಿ ವೈಯಕ್ತಿಕ ಒಪ್ಪಿಕೊಳ್ಳುವಿಕೆಯೂ ಸ್ವೀಕಾರವೂ ಅಗತ್ಯವಾಗಿದೆ. ಇದರ ಅರ್ಥ, ವಿಶ್ವಾಸದ ಅತ್ಯಾವಶ್ಯಕತೆಯು ಆಚಾರಕ್ಕಾಗಿ ಅಲ್ಲ ಆದರೆ "ಸಂಸ್ಕಾರದಲ್ಲಿ," ಕಾರ್ಯ ಸಾಧಿಸುವ ದೇವರಲ್ಲಿ ಇರಬೇಕಾಗಿದೆ ವಿಶ್ವಾಸಿಗಳು ಮರಣ ಹೊಂದಿದ ಮತ್ತು ಎಬ್ಬಿಸಲ್ಪಟ್ಟ, ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ರಕ್ಷಿಸುವ ಸಾಮರ್ಥ್ಯಕ್ಕೆ ಅನ್ವಯಿಸುತ್ತದೆ, ಮತ್ತು ಪಾಪವು ಜಯಿಸಲ್ಪಟ್ಟ ದೈವಿಕ ಜೀವದ ಕ್ಷೇತ್ರದಲ್ಲಿ ಅವರನ್ನು ಇಡುತ್ತದೆ (ರೋಮಾಪುರ 6:7, 9-11).[6]

ಹೆರ್ಬರ್ಟ್ ಎಮ್. ಕಾರ್ಸನ್ ಸರಿಯಾಗಿ ಗಮನಿಸಿದ್ದಾರೆ:

> ಕ್ರಿಸ್ತನ ಪುನರುತ್ಥಾನದಲ್ಲಿ ಆಗಲೇ ಪ್ರದರ್ಶಿಸಲ್ಪಟ್ಟಂತೆ ದೇವರ ಬಲವಾದ ಕಾರ್ಯವು ಹೀಗೆ ವಿಶ್ವಾಸಿಯ ಭರವಸೆಯ ಸಂಗತಿಯಾಗಿದೆ. ಆಗ ವಾದವು ಈ ಕೆಳಗಿನಂತಿರುವುದು: ಅವರು ಕ್ರಿಸ್ತನ ಪುನರುತ್ಥಾನದ ಘಟನೆಯನ್ನು ಒಪ್ಪಿಕೊಂಡಿರುವರು. ಇದು ದೇವರ ಶಕ್ತಿಯ ಸಾಂಕೇತಿಕ ಪ್ರದರ್ಶನವಾಗಿರುವುದು, ಮತ್ತು ಆ ಬಲದ ಮೇಲೆ ಅವಲಂಭಿಸಿ ಅವರು ಕ್ರಿಸ್ತನೊಂದಿಗೆ ಅನ್ಯೋನ್ಯತೆಯಲ್ಲಿ ಆತ್ಮಿಕ ಪುನರುತ್ಥಾನವನ್ನು ಅವರು ತಿಳಿದು ಕೊಂಡಿರುವರು.[7]

ಜಿ. ಆರ್. ಬೀಜ್ಲಿ - ಮುರ್ರೆ ಹೀಗೆ ಹೇಳಿದ್ದಾರೆ,

> ಮನುಷ್ಯನ ಮನೋಭಾವನೆಯು ಯಾವುದೇ ಇದ್ದರೂ ದೇವರು ಕಾರ್ಯ ಸಾಧಿಸುವ, ಇಲ್ಲವೇ ಬಾಪ್ತಿಸ್ಮದಲ್ಲಿ ದೇವರು ಏನು ಮಾಡುತ್ತಾನೆಂಬುದನ್ನು ಅರ್ಥ ಮಾಡಿಕೊಳ್ಳುವ ಇಲ್ಲವೇ ಬಾಪ್ತಿಸ್ಮದ ನಂತರ ಯೋಗ್ಯವಾದ ಪ್ರತ್ಯುತ್ತರ ಮಾಡುವ ಉದ್ದೇಶವನ್ನು ಪ್ರತ್ಯಕ್ಷ ಪಡಿಸುವ, ಬಾಪ್ತಿಸ್ಮಕ್ಕಾಗಿ ಕೇಳುವಂತೆ ಮಾತ್ರವೇ ನಂಬಿಕೆಯ ಕಾರ್ಯವನ್ನು ಪ್ರತಿನಿಧಿಸುವುದು ತಪ್ಪಾಗಿರುತ್ತದೆ.[8]

ಬೀಜ್ಲಿ ಮುರ್ರೆ ಅವರು ಬಾಪ್ತಿಸ್ಮ ಮಾಡಿಸಿಕೊಳ್ಳುವವನಿಗೆ ಚಟುವಟಿಕೆಯ ನಂಬಿಕೆಯಿರಬೇಕಾದ ಅವಶ್ಯಕತೆಯನ್ನು ನೋಡಿದರು. ಇಲ್ಲಿ ಉಲ್ಲೇಖಿಸಿದ ನಂಬಿಕೆಯು ಯೇಸುವು ಎಬ್ಬಿಸಲ್ಪಟ್ಟನು ಎಂಬ ಘಟನೆಯಲ್ಲಿ ಅಲ್ಲ, ಆದರೆ ಅವನು ಬಾಪ್ತಿಸ್ಮ ಹೊಂದುತ್ತಿರುವಂತೆ ತನ್ನ ಸ್ವಂತ ಜೀವಿತದಲ್ಲಿ ಸಂಭವಿಸುತ್ತಿರುವ ದೇವರ ಕೃತ್ಯದಲ್ಲಿ ಇರುತ್ತದೆ. ಅವನು ಹೀಗೆಯೂ ಹೇಳಿದನು,

> ... ಸತ್ತವರೊಳಗಿಂದ ವಿಶ್ವಾಸಿಯನ್ನು ಎಬ್ಬಿಸಲು ನಂಬಿಕೆ ತಾನೇ ಬಲವಿರುವದಿಲ್ಲ - ಅದನ್ನು ಮಾಡಲು ಅದು ದೇವರ ಕಡೆಗೆ ಮಾತ್ರವೇ ನೋಡಬಹುದು; ಆದರೆ ಈ ಹೇಳಿಕೆಯ ಪ್ರಕಾರ, ಬಾಪ್ತಿಸ್ಮ ಹೊಂದಿದವನ ನಂಬಿಕೆಗೆ ಉತ್ತರವಾಗಿ ಬಾಪ್ತಿಸ್ಮದಲ್ಲಿ ಸತ್ತುಹೋದವನನ್ನು ಎಬ್ಬಿಸಲು ದೇವರು ತನ್ನ ಸರ್ವಶಕ್ತಿಯಲ್ಲಿ ಕಾರ್ಯಮಾಡುವನು. ತನ್ನ ಕೃತ್ಯದ ವಿಷಯದ ಚಟುವಟಿಕೆಯ ನಂಬಿಕೆಯನ್ನು

ಬಿಟ್ಟು ದೇವರು ಸತ್ತವರೊಳಗಿಂದ ಎಬ್ಬಿಸುವ ಒಂದು ಬಾಪ್ತಿಸ್ಮವು ಉದ್ದೇಶಿಸಲ್ಪಟ್ಟಿಲ್ಲ.[9]

*Commentary of the Holy Scriptures: Colossians*ದಲ್ಲಿ ಕಾರ್ಲ್ ಬ್ರೌನ್ ಹೀಗೆ ಹೇಳಿದ್ದಾರೆ,

> ದೇವರು ಗುಣಲಕ್ಷಣ ಹೊಂದಿದ್ದಾನೇ: ಸತ್ತವರೊಳಗಿಂದ ಅವನನ್ನು ಯಾರು ಎಬ್ಬಿಸಿದರು, ಯಾಕಂದರೆ ವಿವಾದದ ತರ್ಕ ಓಡುತ್ತದೆ: ದೇವರು ಕ್ರಿಸ್ತನನ್ನು ಎಬ್ಬಿಸಿದನೋ, ಆಗ ಆತನು ನನ್ನನ್ನೂ ಸಹ ನೂತನ ಜೀವಕ್ಕೆ ತರಬಹುದೋ (ಹೋಲಿಸು ಎಫೆಸ 1:19, 20)? ಅಂಥ ಒಂದು "ದೇವರ ಕಾರ್ಯಾಚರಣೆಯಲ್ಲಿ" ನಂಬಿಕೆಯ ಮುಖಾಂತರ ಇದು ಅನುಭವಿಸಲ್ಪಡುತ್ತದೆ.[10]

ವಿಲಿಯಮ್ ಬಾರ್‌ಕ್ಲೇ ಹೀಗೆ ಬರೆದರು,

> ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಬಲವು, ದೇವರ ಪರಿಣಾಮಕಾರಿ ಕಾರ್ಯಾಚರಣೆಯಲ್ಲಿ ಮನುಷ್ಯನು ನಂಬುವಾಗ ಮಾತ್ರವೇ ಇದು ಸಂಭವಿಸುವುದು. ಆಗ ಮಾತ್ರವೇ ಯೇಸು ಕ್ರಿಸ್ತನನ್ನು ಶಿಲುಬೆಯ ಮುಖಾಂತರ ತಂದ ಮತ್ತು ಪುನರುತ್ಥಾನದಲ್ಲಿ ಆತನನ್ನು ಎಬ್ಬಿಸಿದ ಬಲವು ತನಗಾಗಿಯೂ ಅದನ್ನೇ ಮಾಡುವುದೆಂಬ ದೃಢತೆ ಹೊಂದುವನು.[11]

ಮಾರ್ವಿನ್ ಆರ್ ವಿನ್ಸೆಂಟ್ ಅಂಥ ಬದಲಾವಣೆಯು "ದೇವರ ಕಾರ್ಯಾಚರಣೆಯ ವಿಶ್ವಾಸದ ಮುಖಾಂತರ," ಸಂಭವಿಸುತ್ತದೆ, ಅಂದರೆ "ದೇವರು ಕಾರ್ಯ ಮಾಡುವ ವಿಶ್ವಾಸವಲ್ಲ ಆದರೆ ದೇವರ ಕಾರ್ಯಾಚರಣೆಯಲ್ಲಿ ನಿನ್ನ ನಂಬಿಕೆ … ಕ್ರಿಸ್ತನ ಪುನರುತ್ಥಾನದಲ್ಲಿ ಪ್ರದರ್ಶಿಸಲ್ಪಟ್ಟಂತೆ" ಎಂದಿರುತ್ತದೆ.[12]

ಒಂದು ಉತ್ತಮವಾದ ಸಾರಾಂಶವು ರೊಬರ್ಟ್ ಜಿ. ಬ್ರಾಚರ್ ಮತ್ತು ಯೂಜಿನ್ ಎ. ನೈಡಾ ಅವರಿಂದ ಒದಗಿಸಲ್ಪಟ್ಟಿದೆ:

> … [ಕೊಲೊಸ್ಸೆ 2:12]ರ ಕೇಂದ್ರ ಭಾಗವು "ನೀವು ಬಾಪ್ತಿಸ್ಮ ಹೊಂದಿದಾಗ, ತನ್ನ ಬಲದಿಂದ ಎಂಬಂತೆ, ನೀವೆಲ್ಲರೂ ಪುನಃ ಜೀವಿಸುವದಕ್ಕೆ ಕಾರಣನಾದನು, ಅದು ಇದ್ದಂತೆ, ಆತನು ಕ್ರಿಸ್ತನೊಂದಿಗೆ ನಿಮ್ಮನ್ನು ಎಬ್ಬಿಸಿದನು. ಇದು ದೇವರ ಬಲದಲ್ಲಿ ನಿಮ್ಮ ಭರವಸೆಯ ಪರಿಣಾಮವಾಗಿ ಸಂಭವಿಸಿತು."[13]

ಬಾಪ್ತಿಸ್ಮದಲ್ಲಿ ಲಾಭ ಹೊಂದಿದವನು ಯೇಸುವಿನ ಮೃತ ದೇಹಕ್ಕೆ ಜೀವ ಕೊಟ್ಟ ದೇವರ ಶಕ್ತಿಯು ಪಾಪದಲ್ಲಿ ಸತ್ತುಹೋದ ಒಬ್ಬನನ್ನು ತೆಗೆದುಕೊಂಡು ಅವನಿಗೆ ಆತ್ಮಿಕ ಜೀವ ಕೊಡುವುದು ಎಂಬ ನಂಬಿಕೆಯುಳ್ಳ ವ್ಯಕ್ತಿಯಾಗಿದ್ದಾನೆ. ಅದು ಪ್ರಸಂಗಿಯಲ್ಲಿ, ನೀರಿನಲ್ಲಿ, ಆ ಕಾರ್ಯದಲ್ಲಿಯೇ ಆಗಲಿ, ಇಲ್ಲವೇ ಯೇಸುವಿನ ಪುನರುತ್ಥಾನದಲ್ಲಿ ನಂಬಿಕೆ ಆಗಿರುವದಿಲ್ಲ, ಆದರೆ ಅದು ಯೇಸುವನ್ನು ಎಬ್ಬಿಸುವದರಿಂದ ಜೀವಕೊಡಲು (ದೈಹಿಕ ಇಲ್ಲವೇ ಆತ್ಮಿಕ) ತನ್ನ ಬಲವನ್ನು ಪ್ರದರ್ಶಿಸಿದ ದೇವರ ಕಾರ್ಯಾಚರಣೆಯಲ್ಲಿ ನಂಬಿಕೆ ಆಗಿದೆ. ಯೇಸುವಿನ ಮೃತ ದೇಹದಲ್ಲಿ ದೇವರು ನೂತನ ಜೀವವನ್ನು ಹಾಕಿದನು ಎಂಬ ನಂಬಿಕೆ ಒಬ್ಬನಿಗಿದ್ದರೆ, ನಿಶ್ಚಯವಾಗಿಯೂ ಅವನಿಗೆ ದೇವರು ಆತ್ಮಿಕ

ಜೀವವನ್ನು ಕೊಡುವನು ಮತ್ತು ಅವನು ಬಾಪ್ತಿಸ್ಮ ಹೊಂದಿದಾಗ ಕ್ಷಮಾಪಣೆಯನ್ನು ಕೊಡುವನು ಎಂಬ ನಂಬಿಕೆಗೆ ದೃಢವಾದ ಅಸ್ತಿವಾರವಿರುವುದು.

ಬಾಪ್ತಿಸ್ಮದ ಕಾರ್ಯದ ಮೌಲ್ಯತೆಯು ದೇವರು ಮಾಡುತ್ತಿರುವದರ ಮೇಲೆ ಇರುವ ನಂಬಿಕೆಯ ಮೇಲೆ ಅವಲಂಬಿಸಿದೆ. ಅಂಥ ನಂಬಿಕೆಯಿಲ್ಲದ ಕೃತ್ಯವು ಕೇವಲ ಬರಿದಾದ, ಬೆಲೆಯಿಲ್ಲದ ಧರ್ಮಕಾರ್ಯವಾಗಿರುವುದು. ಬಾಪ್ತಿಸ್ಮವು ತಾನೇ - ನಂಬಿಕೆ ಮತ್ತು ತಿಳುವಳಿಕೆಯಿಲ್ಲದೇ ಇರುವಂಥದ್ದು - ಆತ್ಮಿಕವಾಗಿ ಸುನ್ನತಿ ಮಾಡಲಾರದು ಇಲ್ಲವೇ ಒಬ್ಬನನ್ನು ಯೇಸುವಿನೊಂದಿಗೆ ಜೀವಿಸುವಂತೆ ಮಾಡಲಾರದು. ದೇವರ ಕಾರ್ಯಾಚರಣೆಯಲ್ಲಿ ನಂಬಿಕೆಯಿರಬೇಕಾದರೆ, ನಾವು ಬಾಪ್ತಿಸ್ಮ ಹೊಂದುವಾಗ ದೇವರು ಏನನ್ನು ಮಾಡುತ್ತಿರುವನು ಎಂಬುದನ್ನು ನಾವು ಅರ್ಥಮಾಡಿಕೊಳ್ಳತಕ್ಕದ್ದು. ಆತನು ಏನು ಮಾಡಬಲ್ಲನು ಮತ್ತು ಏನು ಮಾಡುವನು ಎಂಬುದರಲ್ಲಿ ನಮ್ಮ ನಂಬಿಕೆಯ ಕಾರಣದಿಂದ, ದೇವರು ನಮ್ಮ ಪಾಪಗಳನ್ನೂ, ಪಾಪದ ದುರಾಶೆಗಳನ್ನೂ ತೆಗೆದು ಹಾಕುತ್ತಿರುವನು ಹಾಗೂ ನಮ್ಮನ್ನು ಆತ್ಮಿಕವಾಗಿ ಜೀವಿತರನ್ನಾಗಿ ಮಾಡುತ್ತಿರುವನು. ಯೇಸುವಿನೊಂದಿಗೆ ಆತನ ಹೂಣಿಡುವಿಕೆಯಲ್ಲಿ ಮತ್ತು ಪುನರುತ್ಥಾನದಲ್ಲಿ ನಮ್ಮನ್ನು ಸಂಬಂಧಿಸಿಕೊಳ್ಳುವಾಗ ಇದು ಸಂಭವಿಸುವುದು. ಬಾಪ್ತಿಸ್ಮದಲ್ಲಿ ನಾವು ಇದನ್ನು ದೈಹಿಕವಾಗಿಯೂ ಆತ್ಮಿಕವಾಗಿಯೂ ಮಾಡುವೆವು.

(1) ಪೌಲನು, ನಾವು ಬಾಪ್ತಿಸ್ಮ ಹೊಂದುತ್ತಿರುವಾಗ ದೇವರ ಕಾರ್ಯಾಚರಣೆಯಲ್ಲಿ ನಂಬಿಕೆಯನ್ನು ಜೀವವನ್ನು ಮತ್ತು ಕ್ಷಮಾಪಣೆಯನ್ನು ಕೊಡಲು ತಳಹದಿಯಂತೆ ದೃಷ್ಟಿಸಿದನು ಮತ್ತು (2) ಅಂಥ ಪರಿಣಾಮಗಳನ್ನು ತರಲು ಬಾಪ್ತಿಸ್ಮಕ್ಕೆ ತನ್ನದೇ ಆದ ಸಾಮರ್ಥ್ಯವಿರುವದಿಲ್ಲ ಎಂದು ನಾವು ತೀರ್ಮಾನಿಸಬೇಕು. ಬಾಪ್ತಿಸ್ಮವು ದೇವರು ಕಾರ್ಯಮಾಡುವ ಸಮಯವಾಗಿದೆ. ಯಾಕಂದರೆ ಯೇಸುವಿನ ಪುನರುತ್ಥಾನದಲ್ಲಿ ದೇವರು ನಮ್ಮನ್ನು ಒಂದು ನೂತನ ಆತ್ಮಿಕ ಜೀವಿತಕ್ಕೆ ಪುನರುತ್ಥಾನಗೊಳಿಸಲು ಮತ್ತು ಬಾಪ್ತಿಸ್ಮದಲ್ಲಿ ನಾವು ಯೇಸುವಿನೊಂದಿಗೆ ಹೂಣಲ್ಪಟ್ಟಾಗ ಮತ್ತು ಪುನರುತ್ಥಾನ ಹೊಂದಿದಾಗ ನಮ್ಮ ಪಾಪಗಳನ್ನು ಕ್ಷಮಿಸಲು ಕಾರ್ಯಮಾಡುವನೆಂದು ನಂಬುವದಕ್ಕೆ ಸಾಕಷ್ಟು ಪುರಾವೆಯನ್ನುಕಂಡುಕೊಳ್ಳುತ್ತೇವೆ.

## ಬದುಕಿಸಲ್ಪಟ್ಟವರು ಮತ್ತು ಕ್ಷಮಿಸಲ್ಪಟ್ಟವರು

> ಅಪರಾಧಗಳನ್ನುಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿದ್ದಾನೆ (ಕೊಲೊಸ್ಸೆ 2:13).

ತಾವು ಬಾಪ್ತಿಸ್ಮ ಹೊಂದುತ್ತಿರುವಾಗ ದೇವರ ಬಲವು ಏನು ಮಾಡಬಲ್ಲದು ಎಂಬುದರಲ್ಲಿ ನಂಬಿಕೆಯಿಡುವವರು ಜೀವಿತರಾಗಿ ಮಾಡಲ್ಪಟ್ಟಿದ್ದಾರೆ. ಅಂಥ ಬದಲಾವಣೆಯಾಗುವುದು ಎಂಬುದನ್ನು ತೋರಿಸಲು ಪೌಲನು ಎರಡು ರೂಪಗಳನ್ನು ಉಪಯೋಗಿಸಿದನು (ಕೊಲೊಸ್ಸೆ 2:11-13).

ಬಾಪ್ತಿಸ್ಮಕ್ಕಿಂತ ಮೊದಲು, ಕೊಲೊಸ್ಸೆಯವರು "ಸುನ್ನತಿಯಿಲ್ಲದವರಾಗಿದ್ದು," ಶರೀರದ ದುರಾಶೆಗಳಿಂದ ನಿಯಂತ್ರಿಸಲ್ಪಟ್ಟಿದ್ದರೆಂದು ಪೌಲನು ಹೇಳಿದನು. "ಪಾಪದಲ್ಲಿ ಸತ್ತು ಹೋದವರು" ಅಂದರೆ, ಆತ್ಮೀಕವಾಗಿ ಸತ್ತು ಹೋದವರು ಮತ್ತು ಪಾಪದೊಂದಿಗೆ ಇನ್ನೂ ಹೊಲೆಯಾದವರು ಎಂದೂ ಸಹ ಅವನು ವಿವರಿಸಿದನು. ಬಾಪ್ತಿಸ್ಮದಲ್ಲಿ,

ಒಂದು ಬದಲಾವಣೆ ತೆಗೆದುಕೊಳ್ಳಲ್ಪಟ್ಟಿತು: ಅವರು ತಮ್ಮ ಶಾರೀರಿಕ ದುರಾಶೆಗಳು ತೆಗೆದುಹಾಕಲ್ಪಡುವದರಿಂದ ಹಾಗೂ ಆತ್ಮಿಕ ಅರ್ಥದಲ್ಲಿ ಯೇಸುವಿನ ಪುನರುತ್ಥಾನದಲ್ಲಿ ಭಾಗಿಗಳಾಗಿದ್ದುದರಿಂದ ಅವರು ಆತ್ಮೀಕವಾಗಿ ಸುನ್ನತಿ ಹೊಂದಿದವರಾದರು. ದೇವರು ಏನನ್ನು ಮಾಡಬಲ್ಲನು, ಎಂಬುದರಲ್ಲಿ ಅವರ ನಂಬಿಕೆಯ ಕಾರಣದಿಂದ, ಪಾಪದಲ್ಲಿ ಅವರು ಇಲ್ಲದವರಾಗಿ ಸಜೀವಿಗಳಾಗಿ ಅವರು ಮಾಡಲ್ಪಟ್ಟರು. ಅವರ ಹಿಂದಿನ ಪರಿಸ್ಥಿತಿಗೆ ಕಾರಣವಾದ ಪಾಪವು ಬಾಪ್ತಿಸ್ಮದಲ್ಲಿ ತೆಗೆದುಹಾಕಲ್ಪಟ್ಟಿತು, ಅವರನ್ನು ಆತ್ಮೀಕ ವಾಗಿ, ಸುನ್ನತಿ ಹೊಂದಿದವರನ್ನಾಗಿಯೂ ಆತ್ಮೀಕವಾಗಿ ಜೀವಿಸುವವರನ್ನಾಗಿಯೂ ಮಾಡಿತು. ಕೊಲೊಸ್ಸೆಯವರನ್ನು ಕುರಿತು ಪೌಲನು ಹೀಗೆ ಹೇಳಿದನು, "ಅಪರಾಧಗ ಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಮ್ಮ ಅಪರಾಧಗ ಳನ್ನೆಲ್ಲಾ ಕ್ಷಮಿಸಿದ್ದಾನೆ ..." (ಕೊಲೊಸ್ಸೆ 2:13).

ಎ. ಟಿ. ರೊಬರ್ಟ್‌ಸನ್, ಪೌಲನ ಸಂದೇಶದ ಈ ಸರಿಯಾದ ಸಾರಾಂಶವನ್ನು ಕೊಟ್ಟಿದ್ದಾನೆ: "ದೇವರು ಜೀವಕೊಟ್ಟನು, ಮತ್ತು ಆತನು ಆತ್ಮಕ್ಕೂ ದೇಹಕ್ಕೂ ಜೀವಕೊಡುವನು. ಸಂಶಯಪಡುವವರಿಗೆ ಪೌಲನು ದೇವರ ಬಲವನ್ನು ಒದಗಿಸುವನು."[14]

ಅನಂತರದಲ್ಲಿ, ಬಾಪ್ತಿಸ್ಮದಲ್ಲಿ ಯೇಸುವಿನೊಂದಿಗೆ ಹೂಣಲ್ಪಡುವ ಮತ್ತು ಎಬ್ಬಿಸಲ್ಪಡುವ ಅನುಭವವನ್ನು ಯಾವುದು ಅನುಸರಿಸಬೇಕೆಂಬುದನ್ನು ಬೋಧಿಸಿದನು. "ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ, ಮೇಲಿರುವವುಗ ಳನ್ನೇ ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡ ಬೇಡಿರಿ. ಯಾಕಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟದೆ" (ಕೊಲೊಸ್ಸೆ 3:1, 2).

## ಸಾರಾಂಶ

ಬಾಪ್ತಿಸ್ಮವಿಲ್ಲದೆ ನಂಬಿಕೆಯು ಸಂಪೂರ್ಣವಾಗಿರುವದಿಲ್ಲ ಮತ್ತು ನಂಬಿಕೆಯಿಲ್ಲದ ಬಾಪ್ತಿಸ್ಮವು ದೇವರ ಕಾರ್ಯದಲ್ಲಿ ಬೆಲೆಯಿಲ್ಲದ್ದಾಗಿದೆ. ಬಾಪ್ತಿಸ್ಮದಲ್ಲಿ ನಾವು ಯೇಸುವಿನ ಹೂಣಿಡುವಿಕೆ ಮತ್ತು ಪುನರುತ್ಥಾನದಲ್ಲಿ ಭಾಗವಹಿಸಲು ಸಿದ್ಧರಾಗಿದ್ದರೆ, ದೇವರು ಮಾಡುವದರ ಮೇಲೆ ಇರುವ ನಂಬಿಕೆಯ ಮೇಲೆ ರಕ್ಷಣೆಯು ಅವಲಂಭಿಸಿರುತ್ತದೆ. ದೇವರ ಬಲವು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ್ದರೆ, ಅದೇ ಶಕ್ತಿಯು ನಮ್ಮನ್ನೂ ಸಹ ನೂತನ ಜೀವಿತಕ್ಕೆ ಎಬ್ಬಿಸುವುದು ಎಂದು ಹೇಳುವ ವಿಶ್ವಾಸವಿದಾಗಿದೆ. ಯೇಸುವಿನೊಂದಿಗೆ ಈ ಬದಲಾವಣೆಯನ್ನು ನಾವು ಅನುಭವಿಸಿದ್ದರೆ, ನಮ್ಮ ಜೀವಿತಗಳನ್ನು ಭೂಲೋಕದ ಗುರಿಗಳಿಂದ ಪರಲೋಕದ ಗುರಿಗಳಿಗೆ ನಾವು ಬದಲಾಯಿಸಬಹುದು.

---

ಟಿಪ್ಪಣಿಗಳು

[1]Ralph P. Martin, *Colossians and Philemon,* The New Century Bible Commentary, gen. ed. Matthew Black (England: Marshall, Morgan & Scott,

1973; reprint, Grand Rapids, Mich.: Wm. B. Eerdmans Publishing Co., 1985), 81. (Emphasis his.) [2]Ibid., 82. [3]Murray J. Harris, *Colossians and Philemon* (Grand Rapids, Mich.: Wm. B. Eerdmans Publishing Co., 1991), 112. [4]Albrecht Oepke, *"baptizo," Theological Dictionary of the New Testament,* vol. 1, ed. Gerhard Kittle, trans. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 539. [5]Robert Jamieson, A. R. Fausset, and David Brown, *Commentary on the Whole Bible* (Grand Rapids, Mich.: Zondervan, 1961), 1321. [6]Ralph P. Martin, *Colossians: The Church's Lord and the Christian's Liberty* (Exerter: The Paternoster Press, 1972), 87. [7]Herbert M. Carson, *Stand Perfect in Wisdom* (Grand Rapids, Mich.: Baker, 1981), 110. [8]G. R. Beasley-Murray, *Baptism in the New Testament* (Grand Rapids, Mich.: Wm. B. Eerdmans Publishing Co., 1977), 273. [9]Ibid., 364. [10]Karl Braune, *Commentary on the Holy Scriptures: Colossians,* vol. 3, new ed., ed. Peter Lange, trans. M. B. Riddle (Grand Rapids, Mich.: Zondervan, 1969), 46.

[11]William Barclay, *The Letters to the Philippians, Colossians and Thessalonians,* rev. ed., The Daily Study Bible Series (Philadelphia: Westminster Press, 1959), 168. [12]Marvin R. Vincent, *Word Studies in the New Testament,* vol. 3 (Grand Rapids, Mich.: Wm. B. Eerdmans Publishing Co., 1946), 489. [13]Robert G. Bratcher and Eugene A. Nida, *A Translator's Handbook of Paul's Letters to the Colossians and to Philemon* (New York: United Bible Societies, 1977), 58. [14]A. T. Robertson, *Paul and Intellectuals: The Epistle to the Colossians,* rev. and ed. W. C. Strickland (New York: Doubleday, Doran and Co., 1928; reprint, Nashville: Broadman Press, 1959), 84.

© 2009 Truth for Today